## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝುನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು-560 072

**ವಾರ್ಡ್ ಸಂಖ್ಯೆ 69 ರಲ್ಲಿ ದಿನಾಂಕ:-20.03.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ನಾಗೇಶ್ ಮೂರ್ತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ರೋಹಿತ್.ಜಿ, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ
3. ಶ್ರೀ ಎನ್.ಕೃಷ್ಣಮೂರ್ತಿ, ಸ.ಕಂ.ಅ.
4. ಶ್ರಿ ರಾಜೇಂದ್ರ ಪ್ರಸಾದ್, (ಮೌಲ್ಯಮಾಪಕರು)
5. ಶ್ರೀ ದಿವ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು.
6. ಶ್ರೀ ವರದರಾಜು, ಕಿ.ಆ.ಪ, ವಾರ್ಡ್ ನಂ.69.
7. ಶ್ರೀ ಎಸ್.ರವಿಚಂದ್ರ, ಬಿ.ಡಬ್ಲ್ಯೂ.ಎಸ್.ಎಸ್.ಬಿ, (ಕೆಲಸ ಪರಿವೀಕ್ಷಕರು).
8. ಶ್ರೀ. ಪಿ.ಹೆಚ್.ನಾರಾಯಣಸ್ವಾಮಿ, ಬೆಸ್ಕಾಂ (ಕೆಲಸ ಪರಿವೀಕ್ಷಕರು)
9. ಶ್ರೀ.ರಂಗಸ್ವಾಮಿ, ಬೆಸ್ಕಾಂ (ಕೆಲಸ ಪರಿವೀಕ್ಷಕರು)
10. ಶ್ರೀ.ಗೋವಿಂದಯ್ಯ, ಸಬ್ ಇನ್ಸ್‌ಪೆಕ್ಟರ್ (ನಂದಿನಿ ಲೇಔಟ್)
11. ಶ್ರೀ ಕೃಷ್ಣಪ್ಪ, ಪೋಲೀಸ್ ಇನ್ಸ್‌ಪೆಕ್ಟರ್, ಸಂಚಾರಿ ಪೋಲೀಸ್ ಠಾಣೆ.
12. ಶ್ರೀ ಸುರೇಶ್, ಪೋಲೀಸ್ ಇನ್ಸ್‌ಪೆಕ್ಟರ್, (ನಂದಿನಿ ಲೇಔಟ್)

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ರಚಿಸಲು ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ಈ ಕೆಳಕಂಡ ಎಂಟು ಜನರನ್ನು ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

| ಕ್ರಸಂ | ಪ್ರದೇಶ | ಸದಸ್ಯರ ಹೆಸರು | ನಾಗರೀಕ ಕಲ್ಯಾಣ ಸಂಘದ ಹೆಸರು |
|---|---|---|---|
| 1 | ಕೆಂಪೇಗೌಡ ಬಡಾವಣೆ | ಸಿದ್ದೇಗೌಡ ಹೆಚ್.ಎಸ್ | ಸಾಮಾಜಿಕ ಕಾರ್ಯಕರ್ತರು |
| 2 | ಲಗ್ಗೆರೆ | ಶ್ರೀಮತಿ ಗಾಯತ್ರಿ ಎನ್.ಜಿ | ಸ್ತ್ರೀ ಶಕ್ತಿ ಸಂಘದ ಅಧ್ಯಕ್ಷರು |
| 3 | ಮುನಿಬಚ್ಚಮ್ಮ ಆಶ್ರಮ | ಶ್ರೀ ರಾಜಗೋಪಾಲ ಎ | ಸ್ವಯಂ ಸೇವಾ ಸಂಘದ ಕಾರ್ಯಕರ್ತರು. |
| 4 | ಮುನೇಶ್ವರ ಬಡಾವಣೆ | ಶ್ರೀ ನಿರಂಜನ್ ಆರ್ | ಸ್ವಯಂ ಸೇವಾ ಸಂಘದ ಕಾರ್ಯಕರ್ತರು. |
| 5 | ಲಗ್ಗೆರೆ | ಶ್ರೀ ಶ್ರೀನಿವಾಸ | ಸಾಮಾಜಿಕ ಕಾರ್ಯಕರ್ತರು |
| 6 | ಲಗ್ಗೆರೆ ಗ್ರಾಮ | ಶ್ರೀ ಜಿ ಬೋರಯ್ಯ | ಸಾಮಾಜಿಕ ಕಾರ್ಯಕರ್ತರು |
| 7 | ಎಫ್ ಎಫ್ ಬಡಾವಣೆ | ಶ್ರೀ ಪ್ರಕಾಶ್ | ಸಾಮಾಜಿಕ ಕಾರ್ಯಕರ್ತರು |
| 8 | ಕೆಂಪೇಗೌಡ ಬಡಾವಣೆ | ಶ್ರೀ ಬಾಬು | ಸಾಮಾಜಿಕ ಕಾರ್ಯಕರ್ತರು |

ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಭೈರವೇಶ್ವರನಗರದಲ್ಲಿ ಬೋರ್‌ವೆಲ್‌ಗಳು ಹಾಳಾಗಿದ್ದು, ಇದನ್ನು ಸರಪಡಿಸುವಂತೆ ತಿಳಿಸಿರುತ್ತಾರೆ. | ಶ್ರೀ.ವಿಶ್ವಮೂರ್ತಿ | ಪ್ರಗತಿಯಲ್ಲಿದೆ. | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂಎಸ್.ಎಸ್.ಬಿ |
| 2 | ಮುನೇಶ್ವರನಗರ, 6ನೇ ಕ್ರಾಸ್‌ನಲ್ಲಿ ಸ್ಯಾನಿಟರಿ ಪೈಪ್‌ಲೈನ್‌ಗಳು ಹಾಳಾಗಿದ್ದು, ಇದನ್ನು ಸರಪಡಿಸುವಂತೆ ತಿಳಿಸಿರುತ್ತಾರೆ. | ಶ್ರೀ.ರಾಜು | ಪ್ರಗತಿಯಲ್ಲಿದೆ. | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂಎಸ್.ಎಸ್.ಬಿ |
| 3 | ಎಲ್.ಜಿ.ರಾಮಣ್ಣ ಬಡಾವಣೆ, ಜ್ಞಾನವರ್ಧಕ ಶಾಲೆ ಹತ್ತಿರ, ಮೋರಿಗಳಲ್ಲಿ ಸಿಲ್ಟ್‌ನ್ನು ತೆಗೆಯುವಂತೆ ತಿಳಿಸಿರುತ್ತಾರೆ. | ಶ್ರೀ.ರವಿಕುಮಾರ್ | ಪ್ರಗತಿಯಲ್ಲಿದೆ. | ಸಹಾಯಕ ಅಭಿಯಂತರರು ಬೃ.ಬೆಂ.ಮ.ಪಾ |
| 4 | ನರಸಿಂಹಸ್ವಾಮಿ ಬಡಾವಣೆಯಲ್ಲಿ ಕುಡಿಯುವ ನೀರನ್ನು ಸರಿಯಾದ ಸಮಯಕ್ಕೆ ಬಿಡುತ್ತಿಲ್ಲವೆಂದು ತಿಳಿಸಿರುತ್ತಾರೆ. | ಶ್ರೀ.ಬಾಬು | ಪ್ರಗತಿಯಲ್ಲಿದೆ. | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂಎಸ್.ಎಸ್.ಬಿ |

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 69 ಲಗ್ಗೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ. 69 ಲಗ್ಗೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ